# ಕರ್ನಾಟಕ ಸರ್ಕಾರದ ನಡವಳಿಗಳು

## (ಜಲ ಸಂಪನ್ಮೂಲ ಇಲಾಖೆ)

**ವಿಷಯ :-** ಹೋದಿರಾಯನ ಹಳ್ಳ ಪಥ ಪರಿವರ್ತನೆ ಯೋಜನೆಯ ₹ 25.37 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರಿಗೆ ವಹಿಸುವ ಕುರಿತು.

**ಓದಲಾಗಿದೆ :-**

1. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ ರವರ ಪತ್ರ ಸಂಖ್ಯೆ : ಮು.ಇಂ : ಕ.ನೀ.ನಿ.ನಿ : ತುಂ.ಮೇ.ಯೋ.ವ : ಟಿಎ-1 ; ಪಿಬಿ-1 : 2007-08 : 5429 : ದಿ: 05.02.2008
2. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ ರವರ ಪತ್ರ ಸಂಖ್ಯೆ : ಮು.ಇಂ : ಕ.ನೀ.ನಿ.ನಿ : ತುಂ.ಮೇ.ಯೋ.ವ : ಟಿಎ-1 ; ಪಿಬಿ-1 : 2010-11 : 413 : ದಿ: 06.05.2010
3. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆ.ಎನ್.ಎನ್. : ತುಂಮೇ.ಯೋ : ಹೋ.ರಾ.ಹ.ಪ : 2010-11 : 3085 ದಿ: 30.11.2010.
4. ಸರ್ಕಾರಿ ಆದೇಶ ಸಂ. PWD / MJP / 80, ದಿ: 18.08.1987
5. ಸರ್ಕಾರಿ ಆದೇಶ ಸಂ. FEE/108/FLL/2004, ದಿ: 28.12.2006

* * * *

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ ರವರು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಜಂಬದಹಳ್ಳ ಜಲಾಶಯವು 0.342 ಟಿ.ಎಂ.ಸಿ. ನೀರಿನ ಸಾಮರ್ಥ್ಯವುಳ್ಳದಾಗಿದ್ದು, 0.70 ಟಿ.ಎಂ.ಸಿ. ನೀರಿನ ಉಪಯುಕ್ತತೆಯನ್ನು ಹೊಂದಿದ್ದು, 2428 ಹೆ. ನೀರಾವರಿ ಅಚ್ಚುಕಟ್ಟನ್ನು ಒಳಗೊಂಡಿರುತ್ತದೆ. ಆದಾಗ್ಯೂ, ಸದರಿ ಜಲಾಶಯವು ತನ್ನ ಜಲಾನಯನ ಪ್ರದೇಶದಲ್ಲಿ ನೀರಿನ ಕೊರತೆಯನ್ನು ಎದುರಿಸುತ್ತಿದೆ. ಮಳೆಯ ಅಭಾವದಿಂದ ಗರಿಷ್ಠ 1130 ಹೆ. ನಷ್ಟು ಅಚ್ಚುಕಟ್ಟು ಪ್ರದೇಶ ಮಾತ್ರ ನಿರ್ಮಾಣವಾಗಿದೆ. ಆದುದರಿಂದ ಜಂಬದಹಳ್ಳ ಜಲಾಶಯದ ಹೆಚ್ಚಿನ ನೀರಿನ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಭದ್ರಾ ನದಿಯ ಉಪನದಿಯಾದ ಹೋದಿರಾಯನ ಹಳ್ಳದಿಂದ 0.56 ಟಿ.ಎಂ.ಸಿ. ನೀರನ್ನು ಮಾರ್ಗ ಪಲ್ಲಟಗೊಳಿಸುವ ಪ್ರಸ್ತಾವನೆಯನ್ನು ಯೋಜಿಸಲಾಯಿತು. ಸದರಿ ಯೋಜನೆಯಡಿ ಭಾದಿತ 1295 ಹೆ. ಅಚ್ಚುಕಟ್ಟಿನ ಜೊತೆ ಹೆಚ್ಚುವರಿಯಾಗಿ 243 ಹೆ. ಅಚ್ಚುಕಟ್ಟಿಗೆ ನೀರೊದಗಿಸಲು ಬಲದಂಡೆ ಕಾಲುವೆಯನ್ನು ವಿಸ್ತರಿಸಲು ₹ 248.00 ಲಕ್ಷಗಳಿಗೆ ಸರ್ಕಾರವು ಮೇಲೆ ಓದಲಾದ (4)ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ನಂತರ ಸದರಿ ಯೋಜನೆಗೆ ದಿ: 24.08.1998ರಲ್ಲಿ ನಡೆದ ಎಂಐಪಿಸಿ ಮಂಡಳಿ ಸಭೆಯಲ್ಲಿ ₹ 915.00 ಲಕ್ಷಕ್ಕೆ ಅನುಮೋದನೆ ನೀಡಲಾಗಿದೆ.

ಮುಂದುವರೆದಿದೆ...

ಮೊದಲನೆ ಪ್ರಸ್ತಾವನೆಯು, ಹೋದಿರಾಯನ ಹಳ್ಳದಿಂದ ಜಂಬದಹಳ್ಳ ಜಲಾಶಯಕ್ಕೆ ತಣಿಗೆಬೈಲು ಬಳಿ ಮಾರ್ಗ ಪಲ್ಲಟ ಮಾಡುವ ಯೋಜನೆಯಾಗಿರುತ್ತದೆ. ಸದರಿ ಡೈವರ್ಷನ್ ಕಾಲುವೆಯ 7.54 ಕಿ.ಮೀ. ಉದ್ದದ ಭಾಗವು ಅರಣ್ಯ ಪ್ರದೇಶದ ಮೂಲಕ ಹಾದು ಹೋಗುತ್ತಿದ್ದು, 16.07 ಹೆ. ನಷ್ಟು ಅರಣ್ಯ ಪ್ರದೇಶದ ಅವಶ್ಯಕತೆ ಇತ್ತು. ಆದುದರಿಂದ 16.07 ಹೆ. ನಷ್ಟು ಅರಣ್ಯ ಪ್ರದೇಶವನ್ನು ಬಿಟ್ಟುಕೊಡುವಂತೆ ಕೋರಿ ಸದರಿ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ ಕಳುಹಿಸಲಾಯಿತು. ಆದರೆ ಸದರಿ ಡೈವರ್ಷನ್ ಕಾಲುವೆಯ ಈ ಭಾಗವು ವನ್ಯ ಜೀವಿ ಸಂರಕ್ಷಣಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದ ಕಾರಣ ಅರಣ್ಯ ಮತ್ತು ಪರಿಸರ ಇಲಾಖೆ, ನವದೆಹಲಿಯು ಸದರಿ ಯೋಜನೆಗೆ ಕೋರಿದ್ದ ಅರಣ್ಯ ಪ್ರದೇಶವನ್ನು ಕೊಡಲು ನಿರಾಕರಿಸಿತು.

ಆದುದರಿಂದ ವನ್ಯ ಜೀವಿ ಸಂರಕ್ಷಣಾ ಪ್ರದೇಶವನ್ನು ತಪ್ಪಿಸುವ ಸಲುವಾಗಿ, ಕಾಲುವೆಗೆ ಪರ್ಯಾಯ ಪಂಕ್ತೀಕರಣವನ್ನು ಆರಿಸಿಕೊಳ್ಳಲಾಯಿತು. ಹೊಸ ಡೈವರ್ಷನ್ ವಿಯರ್‌ನ ಪ್ರದೇಶವು ಈ ಹಿಂದೆ ಉದ್ದೇಶಿಸಿದ ಸ್ಥಳಕ್ಕೆ 2.50 ಕಿಮೀ ಕೆಳಗೆ ಚೀರನಹಳ್ಳಿ ಗ್ರಾಮದ ಬಳಿ ಬರುತ್ತದೆ. ಸದರಿ ಡೈವರ್ಷನ್ ಯೋಜನೆಯು ಡೈವರ್ಷನ್ ವಿಯರ್ ನಿರ್ಮಾಣ ಹಾಗೂ 4.89 ಕಿ.ಮೀ ಉದ್ದದ ಹಾಗೂ 8.50 ಕ್ಯೂಮೆಕ್ಸ್ (300 ಕ್ಯೂಸೆಕ್ಸ್) ಸಾಮರ್ಥ್ಯದ ಕಾಲುವೆಯ ನಿರ್ಮಾಣವನ್ನು ಒಳಗೊಂಡಿರುತ್ತದೆ. ಈ ಡೈವರ್ಷನ್ ವಿಯರ್ ಹಾಗೂ ಕಾಲುವೆಗೆ 12.98 ಹೆ. ಅರಣ್ಯ ಪ್ರದೇಶದ ಅವಶ್ಯಕತೆಯಿದ್ದು, ಅರಣ್ಯ ಇಲಾಖೆಯು 12.98 ಹೆ. ಅರಣ್ಯ ಪ್ರದೇಶವನ್ನು ನೀಡಲು ಮೇಲೆ ಓದಲಾದ (5)ರ ಆದೇಶದಲ್ಲಿ ಒಪ್ಪಿಗೆ ನೀಡಿದೆ. ಅರಣ್ಯ ಇಲಾಖೆಗೆ ₹ 108.86 ಲಕ್ಷ ಮೊತ್ತವನ್ನು ಪರಿಹಾರವಾಗಿ ಅರಣ್ಯೀಕರಣ ವೆಚ್ಚ, ಪ್ರಸ್ತುತ ನಿವ್ವಳ ವೆಚ್ಚ, ಮರಗಳ ಸಂಗ್ರಹಣೆ ಹಾಗೂ ಸಾಗಿಸುವ ವೆಚ್ಚಗಳಿಗೆಂದು ಪಾವತಿಸಲಾಗಿದೆ.

ದಿ: 14.12.2009 ರಂದು ನಡೆದ 94ನೇ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಮುಖ್ಯ ಇಂಜಿನಿಯರ್‌ರವರು ಸಲ್ಲಿಸಿದ್ದ ₹ 2537.00 ಲಕ್ಷಗಳ (2007-08 ರ ದರಪಟ್ಟಿಯಂತೆ) ಅಂದಾಜು ಪಟ್ಟಿಗೆ ಅನುಮೋದನೆ ಕೋರಿ ಮಂಡಿಸಲಾಗಿತ್ತು. ಸದರಿ ಪ್ರಸ್ತಾವನೆಯ ಬಗ್ಗೆ ತಾಂತ್ರಿಕ ಸಲಹಾ ಸಮಿತಿಯು ಚರ್ಚಿಸಿ ಕೆಲವು ಅಂಶಗಳಿಗೆ ಪಾಲನಾ ವರದಿಯನ್ನು ಸಲ್ಲಿಸುವ ಷರತ್ತಿನೊಂದಿಗೆ ಅನುಮೋದನೆ ನೀಡಲಾಯಿತು.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ ರವರು ತಾಂತ್ರಿಕ ಸಲಹಾ ಸಮಿತಿಯು ಕೇಳಲಾದ ಅಂಶಗಳಿಗೆ ಪಾಲನಾ ವರದಿಯನ್ನು ಹಾಗೂ ₹ 2537.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2010-11 ರ ಸಾಲಿನ ಆಯವ್ಯಯದಲ್ಲಿ ಹೋದಿರಾಯನ ಹಳ್ಳ ಪಥ ಪರಿವರ್ತನೆ ಯೋಜನೆಗೆ ₹ 100.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 4701-ಯೋಜನೆ ಅಡಿ ಒದಗಿಸಲಾಗಿದೆ.

ಮುಂದುವರೆದಿದೆ...

ಮೇಲೆ ಓದಲಾದ (3)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರು ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ನಿಗಮದ ವತಿಯಿಂದ ಕೈಗೊಳ್ಳಲು ಆದೇಶವಾದಲ್ಲಿ ಈಗಾಗಲೇ ನಿಗಮಕ್ಕೆ ನೀಡಿರುವ ಅನುದಾನದ ಮರು ಹೊಂದಾಣಿಕೆ ಮಾಡಿಕೊಂಡು ಕಾಮಗಾರಿಯನ್ನು ಕೈಗೊಳ್ಳಬಹುದಾಗಿರುತ್ತದೆ ಎಂದು ತಿಳಿಸಿದ್ದಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 47 ಎಂಎಂಬಿ 2010**

**ಬೆಂಗಳೂರು, ದಿನಾಂಕ : 04.03.2011.**

ಹೋದಿರಾಯನ ಹಳ್ಳ ಪಥ ಪರಿವರ್ತನೆ ಯೋಜನೆಯ ₹ 25.37 (ಇಪ್ಪತ್ತೈದು ಕೋಟಿ ಮುವ್ವತ್ತೇಳು ಲಕ್ಷ ರೂಪಾಯಿಗಳು ಮಾತ್ರ) ಕೋಟಿಗಳ ಅಂದಾಜು ಪಟ್ಟಿಗೆ ಹಾಗೂ ಸದರಿ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣಾ) ನಿಯಮಗಳು, 1977ರ ನಿಯಮ 17, ಉಪನಿಯಮ (2) ರ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/3/11
(ಸಿ. ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ(ತಾಂತ್ರಿಕ-1).

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು. (ಪ್ರಕರಣ ಸಂ: ಸಿ: 57/2011 ದಿ: 21.02.2011 ಕ್ಕೆ ಸಂಬಂಧಿಸಿದಂತೆ)
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
6. ವಿಶೇಷ ಕರ್ತವ್ಯಾಧಿಕಾರಿ ಹಾಗು ಪದನಿಮಿತ್ತ ಉಪಕಾರ್ಯದರ್ಶಿ (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.